## ಲಾಕ್‌ಡೌನ್ ಕಲಿಸಿದ ಅಡುಗೆ



ಅಡುಗೆ ಎಂದರೆ ಅದು ಮಹಿಳೆಯರಿಗೆ ಮಾತ್ರ ಎಂದು ನನ್ನ ತಲೆಯಲ್ಲಿತ್ತು. ಗ್ಯಾಸ್ ಕೂಡ ಹಚ್ಚಲು ಬರುತ್ತಿರಲಿಲ್ಲ. ಆದರೆ, ಲಾಕ್‌ಡೌನ್‌ನಿಂದ ನನಗೆ ಅಡುಗೆ ಮನೆ ಪರಿಚಯವಾಯಿತು. ಬಿಸಿ ಬಿಸಿ ಅಡುಗೆ ಮಾಡಿ ಬಡಿಸುವವರ ಕಷ್ಟವೂ ಗೊತ್ತಾಯಿತು. ಮೊದ ಮೊದಲು ಯೂಟ್ಯೂಬ್ ನೋಡಿ, ಅಮ್ಮನ ಸಹಾಯ ಪಡೆದು ರಸಂ, ಪಲ್ಯ, ಚಟ್ನಿ ಮಾಡುವುದಕ್ಕೆ ಶುರುಮಾಡಿದೆ. ಆರಂಭದಲ್ಲಿ ಕಷ್ಟ ಎನಿಸುತ್ತಿತ್ತು. ನಂತರ ಇದೊಂದು ಟೈಂಪಾಸ್ ಆಯ್ತು. ನನಗೆ ಇಷ್ಟವಾದ ಅಡುಗೆಯನ್ನು, ಸುಲಭದ ಖಾದ್ಯ ತಯಾರಿಸುವುದನ್ನು ಲಾಕ್‌ಡೌನ್ ಕಲಿಸಿತು. ಅಲ್ಲದೆ ಸಮಯ ಸಿಕ್ಕಾಗಲೆಲ್ಲಾ ಏನಾದರೂ ಅಡುಗೆ ಮಾಡೋಣ ಅನಿಸುವಷ್ಟರ ಮಟ್ಟಿಗೆ ಇದು ಇಷ್ಟವಾಯಿತು.

–ಪ್ರಸನ್ನ ಶೆಟ್ಟಿ, ಉಡುಪಿ



ಅವಕಾಶವನ್ನು ಲಾಕ್‌ಡೌನ್ ಒದಗಿಸಿತ್ತು ಎಂದು ಅಡುಗೆ ಸಂಭ್ರಮ ಹಂಚಿಕೊಳ್ಳುವರು ಶರಣ್. ಬ್ಯಾಚುಲರ್ ಆಗಿದ್ದಾಗ ಸ್ವತಃ ಅವರೇ ಅಡುಗೆ ಮಾಡಿಕೊಳ್ಳುತ್ತಿದ್ದರಂತೆ. ಸಿನಿಮಾ ಪ್ರಪಂಚಕ್ಕೆ ಕಾಲಿಟ್ಟ ಬಳಿಕ ಅಡುಗೆ ಮನೆ ಅವರಿಂದ ದೂರವೇ ಉಳಿದಿತ್ತು. ಅಕುಲ್ ಬಾಲಾಜಿ, ರಚಿತಾ ರಾಂ ಕೂಡ ಅಡುಗೆ ಧ್ಯಾನ ಮಾಡಿದ್ದಾರೆ.

### 22 ಬಗೆಯ ದೋಸೆ!

ಸಿಹಿಕಹಿ ಚಂದ್ರು ಲಾಕ್‌ಡೌನ್ ಸಮಯದಲ್ಲಿ ನಿರಂತರವಾಗಿ 22 ಬಗೆಯ ದೋಸೆ, 12 ಬಗೆಯ ಉಪ್ಪಿಟ್ಟುಗಳ ಪ್ರಯೋಗ ಮಾಡಿದ್ದಾರೆ.

'ಪ್ರತಿದಿನ ಹೊಸದು ಮಾಡಬೇಕು ಎಂದು ನಿರ್ಧರಿಸಿ ದೋಸೆ ಪ್ರಯೋಗಕ್ಕೆ ಕೈಹಾಕಿದೆ. ಪ್ರತಿದಿನ ದೋಸೆ ತಿನ್ನುಸ್ತೀಯ ಎಂದು ಮನೆಯವರೆಲ್ಲ ಬೈದರು. ಅದನ್ನು ಬಿಟ್ಟು ಉಪ್ಪಿಟ್ಟಿನ ಪ್ರಯೋಗ ಆರಂಭಿಸಿದೆ. ಮತ್ತೆ ಬೈಯಲು ಶುರು ಮಾಡಿದರು. ಅದನ್ನೂ ಬಿಟ್ಟೆ. ಈಗ ಆ ದಿನ ಮಾಡಿದ್ಯಲಾ ಆ ದೋಸೆ ಮಾಡಿಕೊಡು ಎಂದು ಕೇಳುವರು. ಆದರೆ, ನನಗೆ ಸಮಯವಿಲ್ಲ. ಹೀಗೆ ನಮ್ಮ ಪ್ರಯೋಗಾತ್ಮಕತೆಗೂ ಲಾಕ್‌ಡೌನ್ ವೇದಿಕೆ ಒದಗಿಸಿತ್ತು' ಎನ್ನುವರು ಸಿಹಿಕಹಿ ಚಂದ್ರು.

### ಶಕ್ತಿಕೇಂದ್ರಕ್ಕೆ ಹೊಸ ಚೈತನ್ಯ

ಅಡುಗೆಕೋಣೆ ಎನ್ನುವುದು ಮನೆಯ ಶಕ್ತಿಕೇಂದ್ರವಷ್ಟೇ. ಆದರೆ, ಕಾಲಿಗೆ ಚಕ್ರ ಕಟ್ಟಿಕೊಂಡಂತಹ ಬದುಕಿನ ಸಂದರ್ಭದಲ್ಲಿ ಬಹುತೇಕ ಅಡುಗೆಮನೆಗಳಲ್ಲಿನ ಚಟುವಟಿಕೆಗಳು

